


**ಎಡದಿಂದ ಬಲಕ್ಕೆ**

1. ಆರಿಸಿ ಬಂದವನ ಮುಖಕ್ಕೆ ಮಂಗಳಕರ ಬಣ್ಣ 4
3. ಆಡಲಿಕ್ಕಲ್ಲ ಈ ತಾಣ; ಇದು ಕುಸ್ತಿ ಸ್ಪರ್ಧೆಗೆ ವೇದಿಕೆ 3
4. ಲಂಚಬಾಕರು ಇರಬಾರದೆಂದು ಆಜ್ಞೆ, ಎಚ್ಚರಿಕೆ 3
6. ಗುರುತೇ ಇಲ್ಲದವರನ್ನು ಪತ್ತೆಹಚ್ಚುವ ಹೊಣೆ ಬಹಳ ದೊಡ್ಡದು 4
7. ಅವರ ಇಡೀ ಪರಿವಾರವೇ ನೋಡಬಂದಿರುವುದು ಇದೇ ಕಡಲು 4
8. ಧನಧಾನ್ಯ ಸಮೃದ್ಧಿ ಎಷ್ಟಿದ್ದರೂ ಅವನು ಹಣದ ಗುಲಾಮನೇ ಆಗಿದ್ದಾನೆ 4
10. ಗಾಣದ ಕಾರ್ಯ ಮಾಡುವವನ ಆತ್ಮೀಯ ಮಿತ್ರ ಗೊತ್ತೇ? 4
12. ಅವನ ತಮ್ಮ ನೆಲೆಸಿರುವ ಮನೆಯಲ್ಲಿ ಎಲ್ಲವೂ ಚೆಲ್ಲಾಪಿಲ್ಲಿ 4
14. ಈ ಪ್ರದೇಶಕ್ಕೆ ಇಂಥ ಎಲ್ಲ ವೈಭೋಗ ತಂದವನು ಪರಮಾತ್ಮನಷ್ಟೆ 4
16. ವಿಂಗಡಣೆ ಮಾಡಿದ್ದನ್ನೆಲ್ಲ ಕಲಸಿ ಹಾಕಿತು ಮಂಗಗಳ ಯಜಮಾನ 3
17. ಮರೆಯಲು ಸಾಧ್ಯವೇ ಇಲ್ಲ; ಅಂಥ ದೊಡ್ಡ ಮುಂಡಾಸು 3
18. ರಾಜನಿಗೆಂದೇ ಜನರು ಒಪ್ಪಿಸುತ್ತಿದ್ದ ಗೌರವದ ಕಾಣಿಕೆ 3

**ಮೇಲಿನಿಂದ ಕೆಳಕ್ಕೆ**

1. ಅಡ್ಡಿಯಾಗುವ ಬದಲು ಅಲ್ಲೇ ಎಲ್ಲಾದರೂ ಅವಿಸಿಕೋ 3
2. ಅದೋ, ಆ ಖಳ ನಾಯಕನ ಭಯಂಕರ ಉಗುರನ್ನು ನೋಡಿದಿರಾ? 3
3. ಹೂವನ್ನು ಕಟ್ಟಿ ಮಾರಲು ಅವಕಾಶ ನೀಡಬೇಕೆಂದು ಕೋರಿಕೆ 4
5. ರಂಜನೀಯ ಪ್ರದೇಶಕ್ಕೆಲ್ಲ ಹರಡಿತು ರೋಗದ ಜೊತೆಗಾರ 3
7. ಪೆಟ್ಟಿಗೆಗಳನ್ನೇ ಜೋಡಿಸಿ ರೂಪಿಸಿದ ಸೋಪಾನ ಮಾರ್ಗ 4
9. ಹೊಸಬರು ಯಾರೆಂದರೆ ಉತ್ತರಿಸಿದವರ ಸಂಖ್ಯೆ ಸಾವಿರಾರು 4
11. ಕಳ್ಳನಿಗೆ ನಡುಕ ತಂದದ್ದು ಕಪ್ಪನೆಯ ಸರ್ಪ 3
13. ಬರಿಗಾಲಲ್ಲಿ ನಡೆವವನಿಗೆ ರಕ್ಷಣೆಗೆ ದನಕ್ಕೆ ಬಾರಿಸುವ ಚಾವಟಿ 4
14. ವೈಭವವನ್ನು ಮರೆಸಲೆಂದೇ ನಿರ್ಮಿಸಿದಂತಿದೆ ಭಾರೀ ಮನೆ 3
15. ಇಷ್ಟು ಸುಂದರ ತೋರಣವನ್ನು ರೂಪಿಸಿದಾಕೆ ಇನ್ನೂ ಯುವತಿ 3

## 01—02—2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಉಪಾಸನೆ 3. ವಿರೂಪ 4. ನವೀನ 6. ಅಂಧಕಾರ 7. ಸುಧಾಕರ 9. ನರಾಧಮ 12. ಅವನತಿ 14. ಸತ್ಸಂಗಿ 15. ರಾಜೀವ 16. ಡಮರುಗ

**ಮೇಲಿನಿಂದ ಕೆಳಕ್ಕೆ**

1. ಉಪಕಾರ 2. ನೆನಪಿಸು 3. ವಿವಿಧ 5. ನಡುಕ 6. ಅಂತರ್ಧಾನ 8. ರತ್ನಕಾಂತಿ 10. ರಾಕ್ಷಸ 11. ಮರಗಿಡ 12. ಅನುರಾಗ 13. ನದವ (=ವದನ ತಲೆಕೆಳಗು)

ಪ್ರಶ್ನಾಂಕಣ

## ನಮ್ಮ ಅತ್ಯಂತ ಸನಿಹದ ಪೂರ್ವಜ ಪ್ರಭೇದ ಯಾವುದು?

ಪೃಥ್ವಿಯಲ್ಲಿ ಪ್ರಸ್ತುತ ಉಳಿದಿರುವ ಏಕೈಕ ಮಾನವ ಪ್ರಭೇದ ಆಗಿರುವ ನಮ್ಮ, ಎಂದರೆ ಹೋಮೊ ಸೇಪಿಯನ್‌ಗಳ ಪೂರ್ವಜರ ವಂಶಗಳು ಮತ್ತು ಪ್ರಭೇದಗಳು ಹಲವು ಸಂಖ್ಯೆಯಲ್ಲಿ ಇದ್ದದ್ದು (ಚಿತ್ರ 1, 2, 3) ನಿಮಗೂ ಗೊತ್ತಲ್ಲ? ಸುಮಾರು 4.4 ದಶಲಕ್ಷ ವರ್ಷ ಹಿಂದಿನ ಆರ್ಡಿಪಿಥೀಕಸ್ ರಾಮಿಡಸ್‌ನಿಂದ ತೊಡಗಿ ಈವರೆಗೆ ಪತ್ತೆಯಾಗಿರುವ ಸಕಲ ಪೂರ್ವ ಮಾನವ ಪ್ರಭೇದಗಳಲ್ಲೂ ನಮಗೆ ಅತ್ಯಂತ ಹತ್ತಿರದ ಪ್ರಭೇದ ಯಾವುದು? ಎಂದರೆ, ನಮ್ಮ ಪ್ರಭೇದದ್ದೇ ದೈಹಿಕ ಲಕ್ಷಣಗಳನ್ನು ಗರಿಷ್ಠ ಹೋಲುವ ಪ್ರಭೇದ ಯಾವುದು?

ಇತ್ತೀಚಿನವರೆಗೂ ಎರಡು ಪ್ರಭೇದಗಳು ಹೋಮೊ ಎರೆಕ್ಟಸ್ (ಚಿತ್ರ2) ಮತ್ತು ಹೋಮೊ ನಿಯಾಂಡರ್ಥಾಲೆನ್ಸಿಸ್ (ಚಿತ್ರ 3) ಪ್ರಭೇದಗಳು ಈ ಸ್ಥಾನಕ್ಕೆ ಪೈಪೋಟಿ ನಡೆಸಿದ್ದುವು. ಆದರೆ, 1933ರಲ್ಲಿ ಚೀನಾದ ರೈತ ಕುಟುಂಬವೊಂದರಿಂದ ಪತ್ತೆಯಾಗಿ ಹಾಗೇ ಅಜ್ಞಾತವಾಗಿ ಉಳಿದಿದ್ದು 2018ರಲ್ಲಿ ವಿಜ್ಞಾನಿಗಳ ಕೈಸೇರಿದ ಒಂದು ತಲೆಬುರುಡೆಯಿಂದ ಈ ಪೈಪೋಟಿ ಜಟಿಲಗೊಂಡಿತು; ಜೊತೆಗೆ ಮಾನವ ವಿಕಸನದ ಹಾದಿಯಲ್ಲಿ ಹೊಸದೊಂದು ಅದ್ಭುತ ಶೋಧವೇ ಕೈಗೂಡುವಂತಾಯಿತು. ತಜ್ಞರ ಕೈಸೇರಿದಾಗಿನಿಂದ ಚೀನಾದಲ್ಲಿ ಮಾತ್ರವೇ ಅಲ್ಲದೆ ಇನ್ನೂ ಹಲವು ರಾಷ್ಟ್ರಗಳ ಮಾನವ ಶಾಸ್ತ್ರಜ್ಞರಿಂದ ಈ ತಲೆಬುರುಡೆಯ ತೀವ್ರ ಅಧ್ಯಯನ ನಡೆಯಿತು. ಅವೆಲ್ಲ ಅಧ್ಯಯನಗಳ ಮೊದಲ ಸುತ್ತಿನ ಫಲಿತಾಂಶಗಳು 2021ರಲ್ಲಿ ಅಂತರರಾಷ್ಟ್ರೀಯ ವಿಜ್ಞಾನ ಸಂಶೋಧನಾ ಪತ್ರ 'ದಿ ಇನೋವೇಶನ್'ನಲ್ಲಿ ಪ್ರಕಟಗೊಂಡವು. ಆ ಕುರಿತ ಉನ್ನತ ಸಂಶೋಧನೆಗಳು ಇನ್ನೂ ಈಗಲೂ ಮುಂದುವರೆದಿವೆ.

ತಜ್ಞರ ವರದಿಗಳ ಪ್ರಕಾರ ಈಶಾನ್ಯ ಚೀನಾದ 'ಹಾರ್ಬಿನ್'ನಲ್ಲಿ ಮೂಲತಃ ದೊರಕಿದ್ದ ಆ ಮಾನವ ತಲೆಬುರುಡೆ ಹೋಮೊ ಸೇಪಿಯನ್ನರೂ ಸೇರಿದಂತೆ ಈವರೆಗಿನ ಸಕಲ ಮಾನವ ಪೂರ್ವಜರ ತಲೆಬುರುಡೆಗಿಂತ ಗಾತ್ರದಲ್ಲಿ ದೊಡ್ಡದಾಗಿದೆ. ಆದರೆ ನಮ್ಮಷ್ಟೇ ಗಾತ್ರದ ಮಿದುಳಿಗೆ ಅದರೊಳಗೆ ಸ್ಥಳಾವಕಾಶವಿದೆ. ಕಣ್ಣುಗಳಿಗೆ ಚೌಕಾಕಾರದ ರಂಧ್ರಗಳು, ದೊಡ್ಡ ಬಾಯಿ, ನಮಗಿರುವುದಕ್ಕಿಂತ ದೊಡ್ಡ ಹಲ್ಲುಗಳು, ಸಾಧಾರಣ ಎತ್ತರದ ಕಟ್ಟುಮಸ್ತಾದ ಶರೀರ... (ಚಿತ್ರ 4 ನೋಡಿ). ಚಿಕ್ಕ ಚಿಕ್ಕ ಸಂಖ್ಯೆಗಳಲ್ಲಿ, ಪ್ರತ್ಯೇಕ ಗುಂಪುಗಳಾಗಿ ಅಲೆಮಾರಿ ಬದುಕು ನಡೆಸುತ್ತಿದ್ದ ಜನ ಅವರು.




ಈವರೆಗಿನ ಸಾಕ್ಷ್ಯಾಧಾರಗಳನ್ನು ಆಧರಿಸಿ ಬಹು ಜನ ವಿದ್ವಾಂಸರು ತೀರ್ಮಾನಿಸಿರುವಂತೆ ನಮ್ಮನ್ನೇ ಬಹಳ ಹೋಲುವಂತಿದ್ದರೂ ಈ ನಮ್ಮ ಪೂರ್ವಜರು ನಮ್ಮಿಂದ ಒಂದು ಪ್ರತ್ಯೇಕ ಪ್ರಭೇದವೇ ಆಗಿದ್ದಾರೆ. ಅದಕ್ಕೇ ಅವರಿಗೆ ಡ್ರಾಗನ್ ಮನುಷ್ಯ ಎಂಬರ್ಥ ಬರುವ ಹೋಮೊ ಲೋಂಗಿ ಎಂಬ ವಿಭಿನ್ನ ಪ್ರಭೇದ ನಾಮವನ್ನೇ ನೀಡಲಾಗಿದೆ ಕೂಡ. ಈ ಹೋಮೊ ಲೋಂಗಿ ಪ್ರಭೇದವೇ ನಮ್ಮ ಅತ್ಯಂತ ಹತ್ತಿರದ ಸಂಬಂಧಿ.

■ ಎನ್. ವಾಸುದೇವ್